


# ಆಕ್ಟಿವ್ ಆಗಿ, ಇಲ್ಲವಾದಲ್ಲಿ ಡಿಲೀಟ್ ಮಾಡ್ತೀವಿ

■ ಶಶಿಕುಮಾರ್ ಸಿ.

ಲಾಗಿನ್ ಆದ ಬಳಿಕ ಎರಡು ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಗೂಗಲ್, ಮತ್ತದರ ಯಾವುದೇ ಆನ್‌ಲೈನ್ ವೇದಿಕೆಗಳ ಖಾತೆಗಳನ್ನು ಬಳಸದಿದ್ದರೆ, ಅಂತಹ ಖಾತೆಗಳನ್ನು ಗೂಗಲ್ ತಾನಾಗಿಯೇ ಡಿಲೀಟ್ ಮಾಡುವ ಎಚ್ಚರಿಕೆ ನೀಡಿದೆ.

ಜಗತ್ತಿನ ಬಹುತೇಕರು ಒಂದಲ್ಲ ಒಂದು ರೀತಿಯಲ್ಲಿ ಗೂಗಲ್ ಮತ್ತು ಅದರ ಆನ್‌ಲೈನ್ ವೇದಿಕೆಗಳ ಮೇಲೆ ಅವಲಂಬಿತರಾಗಿತ್ತಾರೆ. ಒಂದಲ್ಲ ಒಂದು ಸಂದರ್ಭದಲ್ಲಿ ಗೂಗಲ್‌ನ ಯಾವುದಾದರೊಂದು ಆನ್‌ಲೈನ್ ವೇದಿಕೆಗೆ ಲಾಗಿನ್ ಆಗಿರುತ್ತಾರೆ. ಅದರೊಂದಿಗಿನ ಕೆಲಸ ಮುಗಿದ ಮೇಲೆ ಮತ್ತೆ ಆ ಖಾತೆಯತ್ತ ಬಳಕೆದಾರರು ತಿರುಗಿಯೂ ನೋಡಿರುವುದಿಲ್ಲ. ಅಂತಹ ಖಾತೆಗಳು ಸತತ ಎರಡು ವರ್ಷಗಳಿಂದ ಇನ್‌ಆಕ್ಟಿವ್ ಆಗಿದ್ದರೆ ಅವುಗಳನ್ನು ಡಿಲೀಟ್ ಮಾಡುವ ನಿರ್ಧಾರಕ್ಕೆ ಗೂಗಲ್ ಬಂದಿದೆ.

ನಿಷ್ಕ್ರಿಯಗೊಂಡಿರುವ ಅಥವಾ ಬಳಕೆಯಾಗದ ಅಕೌಂಟ್‌ಗಳನ್ನು ಡಿಲೀಟ್ ಮಾಡುವ ನಿರ್ಧಾರದ ಬಗ್ಗೆ ಮಾಹಿತಿಯನ್ನು ತನ್ನ ಬಳಕೆದಾರರೊಂದಿಗೆ ಗೂಗಲ್ ಹಂಚಿಕೊಂಡಿದ್ದು, ಈ ವರ್ಷಾಂತ್ಯದಲ್ಲಿ ಅದು ಜಾರಿಗೆ ಬರಲಿದೆ ಎಂದು ಸ್ಪಷ್ಟಪಡಿಸಿದೆ.

## ಡಿಲೀಟ್ ಯಾಕೆ?

ಬಳಕೆದಾರರ ಖಾತೆಗಳ ಭದ್ರತಾ ಕ್ರಮಗಳನ್ನು ಇನ್ನಷ್ಟು ಬಲಪಡಿಸಲು ಮತ್ತು ತನ್ನ ಅಸಂಖ್ಯ ಬಳಕೆದಾರರಿಗೆ ಎದುರಾಗಬಹುದಾದ ಅಪಾಯವನ್ನು ಕಡಿಮೆ ಮಾಡಲು ಈ ಮಹತ್ವದ ನಿರ್ಧಾರ ಕೈಗೊಂಡಿದೆ.

2 ಸ್ಟೆಪ್ ವೆರಿಫಿಕೇಷನ್ ಸೆಟ್ ಅಪ್ ಹೊಂದಿರುವ ಗೂಗಲ್‌ನ ಖಾತೆಗಳು ಸದ್ಯದ ಮಟ್ಟಿಗೆ ಹೆಚ್ಚು ಸುರಕ್ಷಿತ. ಆದರೆ, ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದ ಖಾತೆಗಳಿಗೆ ಅಪಾಯ ಜಾಸ್ತಿ. ಅಂದರೆ ಇಂತಹ ಖಾತೆಗಳು ಹೆಚ್ಚು ದುರ್ಬಲವಾಗಿರುತ್ತವೆ. ಹೀಗಾಗಿ, ಖಾತೆಗಳ ಭದ್ರತೆಯಲ್ಲಿ ರಾಜಿ ಮಾಡಿಕೊಂಡರೆ ಇದು ಐಡೆಂಟಿಟಿ ಥೆಫ್ಟ್ ಅಥವಾ ಗುರುತಿನ ಕಳ್ಳತನದಿಂದ ಹಿಡಿದು, ಸ್ಪ್ಯಾಮ್‌ನಂತಹ ಅನಗತ್ಯ ಅಥವಾ ದುರುದ್ದೇಶಪೂರಿತ ಆನ್‌ಲೈನ್ ಕೃತ್ಯಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಈ ಕಾರಣಕ್ಕೆ ಇನ್‌ಆಕ್ಟಿವ್ ಖಾತೆಗಳನ್ನು ಡಿಲೀಟ್ ಮಾಡಲಾಗುತ್ತಿದೆ. ಈ ಬಗ್ಗೆ ತನ್ನ ಅಧಿಕೃತ ಬ್ಲಾಗ್‌ನಲ್ಲಿ ಗೂಗಲ್ ಮಾಹಿತಿ ಹಂಚಿಕೊಂಡಿದೆ.

2020ರಲ್ಲಿಯೂ ಇಂತಹದ್ದೇ ಸಾಹಸಕ್ಕೆ ಕೈಹಾಕಿದ್ದ ಗೂಗಲ್, ಅಂದು ನಿಷ್ಕ್ರಿಯ ಖಾತೆಯಲ್ಲಿ ಸಂಗ್ರಹವಾಗಿರುವ ಡಾಟಾವನ್ನಷ್ಟೇ ತೆಗೆಯುವುದಾಗಿ ಹೇಳಿತ್ತು.

## ಯಾವ ಖಾತೆಗಳು ಡಿಲೀಟ್?

ಗೂಗಲ್ ವರ್ಕ್‌ಸ್ಪೇಸ್ (Gmail, Docs, Drive, Meet, Calendar) ಮತ್ತು ಗೂಗಲ್ ಫೋಟೊಗಳು ಸೇರಿದಂತೆ ಬಳಕೆಯಾಗದ ಖಾತೆ ಮತ್ತು ಅದರಲ್ಲಿರುವ ಡಾಟಾವನ್ನು ಗೂಗಲ್ ಅಳಿಸಿ ಹಾಕಲು ನಿರ್ಧರಿಸಿದೆ. ಡಿಲೀಟ್ ಮಾಡುವ ಈ ಪ್ರಕ್ರಿಯೆಯು ವೈಯಕ್ತಿಕ ಗೂಗಲ್ ಖಾತೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಶಾಲೆಗಳು ಮತ್ತು ವ್ಯಾಪಾರ ಉದ್ಯಮಗಳ ಗೂಗಲ್ ಖಾತೆಗಳ ಮೇಲೆ ಇದು ಪರಿಣಾಮ ಬೀರುವುದಿಲ್ಲ.

## ಡಿಲೀಟ್ ಆಗುವ ಬಗ್ಗೆ ಮಾಹಿತಿ

ಬಳಕೆಯಾಗದ ಖಾತೆಗಳನ್ನು ಡಿಲೀಟ್ ಮಾಡುವ ಬಗ್ಗೆ ಹಂತ ಹಂತವಾಗಿ ಗೂಗಲ್ ಪ್ರಕ್ರಿಯೆ ಆರಂಭಿಸಲಿದೆ. ಖಾತೆಯನ್ನು ಡಿಲೀಟ್ ಮಾಡುವ ಮೊದಲು ಖಾತೆಯೊಂದಿಗೆ ಲಿಂಕ್ ಆಗಿರುವ ಇಮೇಲ್‌ಗೆ ಮತ್ತು ರಿಕವರಿ ಇಮೇಲ್‌ಗೆ (ಖಾತೆ ತೆರೆಯುವ ವೇಳೆ ನೀಡಿದ್ದರೆ) ಕೆಲ ತಿಂಗಳ ಮೊದಲೇ ಹಲವು ಹಂತದ ನೋಟಿಫಿಕೇಷನ್‌ಗಳನ್ನು ಕಳುಹಿಸುತ್ತದೆ. ಅದಾಗ್ಯೂ ಬಳಕೆದಾರರು ಎಚ್ಚೆತ್ತುಕೊಳ್ಳದಿದ್ದರೆ ಖಾತೆ ಡಿಲೀಟ್ ಮಾಡಲಿದೆ.

## ಡಿಲೀಟ್ ಕಾರ್ಯ ಯಾವಾಗ?

ಗೂಗಲ್ ಕೆಲ ತಿಂಗಳಲ್ಲಿ ಹೊಸ ಕಾರ್ಯನೀತಿಯನ್ನು ಜಾರಿಗೊಳಿಸಲಿದೆ. ಇದು ಜಾರಿಗೊಂಡ ತಕ್ಷಣವೇ ನಿಷ್ಕ್ರಿಯ ಖಾತೆಗಳನ್ನು ಹೊಂದಿರುವ ಬಳಕೆದಾರರಿಗೆ ಸಮಯ ನೀಡಿ ಕ್ರಮ ಜರುಗಿಸುತ್ತದೆ. 2023ರ ಡಿಸೆಂಬರ್‌ನಿಂದ ಡಿಲೀಟ್ ಮಾಡುವ ಪ್ರಕ್ರಿಯೆ ಆರಂಭವಾಗುತ್ತದೆ ಎಂದು ಕಂಪನಿ ಹೇಳಿದೆ. ■

# ಯುವ ಸಶಕ್ತತೆಗೆ ‘ಮೇರಿ ಲೈಫ್’ ಪ್ರೇರಣೆ

ಕೇಂದ್ರ ಸರ್ಕಾರವು ಈಚೆಗೆ ‘ಮೇರಿ ಲೈಫ್’(ನನ್ನ ಬದುಕು) ಆ್ಯಪ್ ಪರಿಚಯಿಸಿದ್ದು, ಯುವಕರನ್ನು ಸಶಕ್ತಗೊಳಿಸುವ ಹಾಗೂ ಹವಾಮಾನ ಬದಲಾವಣೆಗೆ ಕಡಿವಾಣ ಹಾಕುವ ಕಾರ್ಯದಲ್ಲಿ ಅವರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿದೆ.

ಕೇಂದ್ರ ಸರ್ಕಾರದ್ದೇ ಆದ ‘ಮಿಷನ್ ಲೈಫ್’ ಆ್ಯಪ್‌ನಿಂದ ಪ್ರೇರಣೆಗೊಂಡು ಈ ಹೊಸ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಮೇರಿ ಲೈಫ್‌ನಲ್ಲಿನ ‘ಲೈಫ್’ ಎಂಬ ಪದವು ಪರಿಸರಕ್ಕಾಗಿ ಜೀವನಶೈಲಿ ಎಂಬ ಅರ್ಥವನ್ನು ಕೊಡುತ್ತದೆ. ಪರಿಸರವನ್ನು ಉಳಿಸಿ ಬೆಳೆಸುವ ದಿಸೆಯಲ್ಲಿ ರಾಷ್ಟ್ರವ್ಯಾಪಿ ಆಂದೋಲನ ಕೈಗೊಳ್ಳುವುದಕ್ಕೆ ಈ ಆ್ಯಪ್ ನೆರವಾಗಲಿದೆ. ನಾಗರಿಕರ ಶಕ್ತಿ ಪ್ರದರ್ಶನಕ್ಕೂ ವೇದಿಕೆ ಕಲ್ಪಿಸಲಿದೆ.

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಹಾಗೂ ಖಾಸಗಿ ಸಂಸ್ಥೆಗಳ ಪಾಲ್ಗೊಳ್ಳುವಿಕೆಯನ್ನು ಈ ಆ್ಯಪ್ ಪ್ರೋತ್ಸಾಹಿಸಲಿದೆ. ಪರಿಸರ ರಕ್ಷಣೆಗಾಗಿ ಕೈಗೊಳ್ಳಬೇಕಿರುವ ಸುಸ್ಥಿರ ಚಟುವಟಿಕೆಗಳ ಕುರಿತು ಇದರ ಮೂಲಕ ಜಾಗೃತಿ ಮೂಡಿಸಬಹುದಾಗಿದೆ. ಆ್ಯಪ್ ಕುರಿತು ಜನರಲ್ಲಿ ಅರಿವು ಮೂಡಿಸಲು ಒಂದು ತಿಂಗಳ ಕಾಲ ಅಭಿಯಾನ ಕೈಗೊಳ್ಳಲಾಗುತ್ತದೆ.

ಪರಿಸರ ಸಚಿವಾಲಯ ರಚಿಸಿರುವಂತಹ 100ಕ್ಕೂ ಅಧಿಕ ಸೃಜನಶೀಲ ವಿಡಿಯೊಗಳು ಹಾಗೂ ಇತರ ಜ್ಞಾನಾಧಾರಿತ ಸಾಮಗ್ರಿಗಳು ಈ ಆ್ಯಪ್‌ನಲ್ಲಿ ಲಭ್ಯವಿರುತ್ತವೆ. ಅವು ಎಲ್ಲರಿಗೂ ಮುಕ್ತವಾಗಿ ದೊರೆಯಲಿವೆ. ■

